ಉ) ಪ್ರಸ್ತುತ ಸಾಮಾನ್ಯ ನೇಮಕಾತಿ ನಿಯಮಾವಳಿಗಳ ಪ್ರಕಾರ ಆಯ್ಕೆಯಾಗದ ಅಭ್ಯರ್ಥಿಗಳ ಶೇಕಡ 2ರಷ್ಟು ಹೆಚ್ಚುವರಿ ಪಟ್ಟಿಯನ್ನು ತಯಾರಿಸಲಾಗಿದ್ದು, ಅಂತಹ ಅಭ್ಯರ್ಥಿಗಳಿಂದ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು. ಹಾಗೂ ಜಿಲ್ಲೆಗೆ 400 ಹೆಚ್ಚುವರಿ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು ಮಂಜಾರಾಗಿದ್ದು ಅವುಗಳನ್ನೂ ಸಹ ಸದ್ಯದಲ್ಲಿಯೇ ಭರ್ತಿಮಾಡಲಾಗುವುದು.

ಶ್ರೀ ಮಂಜುನಾಥ ಸಿ. ಕುನ್ನೂರು : ಸನ್ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಖಾಲಿ ಇರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು ಎಷ್ಟು ಎಂದು ಕೇಳಿದ್ದಕ್ಕೆ ಉತ್ತರದಲ್ಲಿ 3608 ಎಂದು ಹೇಳಿದ್ದಾರೆ. ಧಾರವಾಡ ಜಿಲ್ಲೆಯಲ್ಲಿ ಶಿಕ್ಷಕರ ಹುದ್ದೆಗಳು ಖಾಲಿ ಇರುವುದು 276 ಎಂದು ಹೇಳಿದ್ದಾರೆ; ತಾಲ್ಲೂಕುವಾರು ಮಾಹಿತಿ ಕೇಳಿದಾಗ ನನ್ನ ಮತಕ್ಷೇತ್ರದಲ್ಲಿ 43 ಹುದ್ದೆಗಳು ಖಾಲಿ ಇವೆ.ಈ ಹುದ್ದೆಗಳ ಅಂಕಿಸಂಖ್ಯೆಗಳನ್ನು ನೋಡಿದಾಗ ಇನ್ನೂ ಸುಮಾರು ನಾನು 19.8.94ರಂದು ಇಲಾಖೆಯ ಅಧಿಕಾರಿಗಳನ್ನು ಮತ್ತು ಎ.ಇ.ಓ.ಗಳನ್ನು ಕೇಳಿದೆ. ಸುಮಾರು ನೂರರ ಮೇಲ್ಪಟ್ಟು ಹುದ್ದೆಗಳು ಖಾಲಿ ಇವೆಯೆಂದು ತಿಳಿದುಬಂತು. ನಾನು ಪ್ರತಿಯೊಂದು ಹಳ್ಳಿಗೆ ಹೋದಾಗಲೂ ಮೊದಲು ಶಿಕ್ಷಕರನ್ನು ನಮಗೆ ಕೊಡಿ, ಆಮೇಲೆ ಸಾಕ್ಷರತಾ ಆಂದೋಲನದಂಥ ಕಾರ್ಯಕ್ರಮಗಳನ್ನು ಮಾಡಿರಿ ಎಂಬ ಕೂಗು ಕೇಳಿಬಂತು? ಆದಕಾರಣ ಕೂಡಲೇ ಹುದ್ದೆಗಳನ್ನು ಭರ್ತಿಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳುತ್ತೇನೆ.

ಶ್ರೀ ಎಸ್.ಎಂ. ಯಾಹ್ಯಾ : ಎಲ್ಲೆಲ್ಲಿ ಅಪ್ರೂವ್ಡ್ ಪೋಸ್ಟ್‌ಗಳು ಇವೆ, ಅಲ್ಲೆಲ್ಲ ಫಿಲ್‌ಅಪ್ ಮಾಡಬೇಕೆಂಬ ಸರ್ಕಾರದ ನೀತಿ ಪ್ರಕಾರ, ಎಲ್ಲಿ ಅಪ್ರೂವ್ಡ್ ವೇಕೆಂಟ್ ಪೋಸ್ಟ್ ಇವೆ, ನಾವು ಅಲ್ಲಿ ಫಿಲ್‌ಅಪ್ ಮಾಡಿದ್ದೇವೆ. 1987ರಲ್ಲಿ ಎಕಾನಮಿ ಆರ್ಡರ್ ಇತ್ತು.ಇದನ್ನು ನಾವು ಕಳೆದವರ್ಷ ತೆಗೆದುಹಾಕಿದ್ದರಿಂದ, ಬೇಕಾದಷ್ಟು ವೇಕೆಂಟ್ ಪೋಸ್ಟ್ ಇದ್ದವು. ಈವರೆಗೆ ಆ ಎಲ್ಲ ವೇಕೆಂಟ್ ಟೀಚರ್ಸ್ ಪೋಸ್ಟ್‌ಗಳನ್ನು ನಾವು ಈ ಒಂದು ಹೊಸ ನೀತಿಯ ಪ್ರಕಾರ ಫಿಲ್‌ಅಪ್ ಮಾಡಿದ್ದೇವೆ. ಆದರೆ ಕೆಲವು ಅಡಿಶನಲ್ ಪೋಸ್ಟ್‌ಗಳು ಇವೆ. ಆ ಅಡಿಶನಲ್ ಪೋಸ್ಟ್‌ಗಳನ್ನೆ ವೇಕೆಂಟ್ ಪೋಸ್ಟ್ ಎಂದು ಹೇಳುವುದಕ್ಕೆ ಆಗುವುದಿಲ್ಲ. ಆದರೆ ಅಪ್ರೂವ್ಡ್ ವೇಕೆಂಟ್ ಪೋಸ್ಟ್ ಎಲ್ಲಾದರೂ ಇದ್ದರೆ ನಾವು ಬೇಗನೆ ಫಿಲ್‌ಅಪ್ ಮಾಡುತ್ತೇವೆ. ಈವರೆಗೆ ಅಂತಹ ಎಲ್ಲ ಪೋಸ್ಟ್‌ಗಳನ್ನು ಫಿಲ್‌ಅಪ್ ಮಾಡಿದ್ದೇವೆ.

ಶ್ರೀ ಮಂಜುನಾಥ ಸಿ. ಕುನ್ನೂರು : ಸನ್ಮಾನ್ಯ ಅಧ್ಯಕ್ಷರೇ, ನಾನು ಅಡಿಶನಲ್ ಅಪ್ರೂವ್ಡ್ ಲಿಸ್ಟ್ ಬಗ್ಗೆ ಕೇಳುತ್ತಿಲ್ಲ, ನಮ್ಮ ಮತಕ್ಷೇತ್ರದಲ್ಲಿ ಎಷ್ಟು ಮಂಜೂರಾದ ಶಿಕ್ಷಕರ ಹುದ್ದೆಗಳು ಇವೆ, ಅವುಗಳು ಖಾಲಿ ಇವೆ, ತಮ್ಮ ಉತ್ತರದಲ್ಲೇ 43 ಹುದ್ದೆಗಳು ಖಾಲಿ ಇವೆಯೆಂದು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ಅದು 43 ಅಲ್ಲ, ಇನ್ನೂ ಸುಮಾರು ನೂರು ಹುದ್ದೆಗಳು ಖಾಲಿ ಇವೆ. ಅದನ್ನು ತಾವು ಪರಿಶೀಲಿಸಿ ಆದಷ್ಟು ಬೇಗನೆ ಕೊನೆಯಪಕ್ಷ ಮಂಜೂರಾದ ಶಿಕ್ಷಕರ ಹುದ್ದೆಗಳನ್ನಾದರೂ ತುಂಬಿಸತಕ್ಕಂಥ ವ್ಯವಸ್ಥೆ ಮಾಡಬೇಕೆಂದು ತಮ್ಮ ಮುಖಾಂತರ ಅವರನ್ನು ಕೇಳುತ್ತೇನೆ.

ಶ್ರೀ ಎಸ್.ಎಂ. ಯಾಹ್ಯಾ : ಖಂಡಿತವಾಗಿಯೂ ಮಾಡುತ್ತೇನೆ.

**ಶಿರಾ ತಾಲ್ಲೂಕು ತರೂರು ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ**

633 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ತುಮಕೂರು ಜಿಲ್ಲೆ, ಶಿರಾ ತಾಲ್ಲೂಕು ತರೂರು ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಇದುವರೆಗೆ ಮಂಜೂರಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

*ಆ) ಈ ಬಗ್ಗೆ ಸಾರ್ವಜನಿಕರು ಅನೇಕ ಮನವಿಗಳನ್ನು ಸರ್ಕಾರಕ್ಕೆ ಕೊಟ್ಟಿದ್ದರೂ ಸರಕಾರದವರು ಕ್ರಮ ಕೈಗೊಳ್ಳದಿರಲು ಕಾರಣವೇನು?*

ಇ) *ಸರ್ಕಾರದವರು ಮನವಿಯನ್ನು ಪುರಸ್ಕರಿಸಲು ಶೀಘ್ರ ಕ್ರಮವನ್ನು ಕೈಗೊಳ್ಳುವುದೇ?*

ಡಾ॥ ಎ.ಬಿ. ಮಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಹೌದು

ಆ) ಪರಿಶೀಲನೆಯಲ್ಲಿದೆ

ಇ) ಪರಿಶೀಲಿಸಲಾಗುವುದು

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೇ, ತರೂರು ಗ್ರಾಮದಲ್ಲಿ ಒಂದು ಆಸ್ಪತ್ರೆಯನ್ನು ಮಂಜೂರು ಮಾಡುವ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕೆ ಸರ್ಕಾರದ ಉತ್ತರ 'ಹೌದು' ಪರಿಶೀಲನೆಯಲ್ಲಿದೆ. ಮತ್ತು 'ಪರಿಶೀಲಿಸಲಾಗುವುದು' ಎಂದಿದೆ. ಒಂದೊಂದು ಸಾರಿ ಪ್ರಶ್ನೆಗಳಿಗೆ ಕೊಡುವ ಉತ್ತರಗಳನ್ನು ನೋಡಿದಾಗ ನಗಬೇಕೋ, ಅಳಬೇಕೋ ಎನ್ನುವ ಅನುಮಾನ ನಮಗೆ ಬರುತ್ತದೆ. ಆದರೆ ಈ ಉತ್ತರವನ್ನು ನೋಡಿದಾಗ ನಾನು ನಗುವುದಿಲ್ಲ ಅಳುತ್ತಾನೂ ಇಲ್ಲ. ಸ್ವಾಮಿ, ದಯಮಾಡಿ ಕೇಳಿ, ಇದು ಎಷ್ಟನೇ ಸಾರಿ, ಈ ಆಶ್ವಾಸನೆಯನ್ನು, ಈ ರೀತಿ ಉತ್ತರವನ್ನು ಕೊಡುತ್ತಾ ಇರತಕ್ಕದ್ದು. ಎರಡನೆಯದು, ಆಸ್ಪತ್ರೆಯನ್ನು ಮಂಜೂರು ಮಾಡುವ ಮುನ್ನ ಪೂರ್ವಭಾವಿಯಾಗಿ ಜನಸಂಖ್ಯೆಯ ಆಧಾರವನ್ನು, ಎಲ್ಲ ಅಂಕಿಸಂಖ್ಯೆಗಳನ್ನು ಗಣನೆಯಲ್ಲಿ ಇಟ್ಟುಕೊಂಡೇ ಆಸ್ಪತ್ರೆಯನ್ನು ಮಂಜೂರು ಮಾಡಬೇಕೆಂದು ತೀರ್ಮಾನ ಮಾಡಿದನಂತರ ಸಾರ್ವಜನಿಕರಿಂದ ವಂತಿಕೆಯನ್ನು ಸ್ವೀಕಾರ ಮಾಡುತ್ತಾ ಇರತಥಾದ್ದು. ಆ ಎಲ್ಲ ಕ್ರಮಗಳನ್ನು ಅನುಸರಿಸಿ, ಹಣವನ್ನು ತೆಗೆದುಕೊಂಡು, ಜಮೀನು ಇಟ್ಟುಕೊಂಡು ಅದಕ್ಕೆ ಒಂದು ಖಾಲಿ ಕಟ್ಟಡವನ್ನು ಹನ್ನೊಂದು ವರ್ಷಗಳಿಂದ ಬಾಕಿ ಇಟ್ಟುಕೊಂಡಿದ್ದು, ಇದರ ಬಗ್ಗೆ ನಾನು ಅನೇಕ ಸಲ ಮನವಿಯನ್ನು ಕೊಟ್ಟಿದ್ದೇನೆ. ಆದರೆ ಇಲ್ಲಿಯವರೆಗೂ ಅದು ಬಂದಿಲ್ಲ. ಸರ್ಕಾರದ ನಿಯಮ ಏನು ಎಂದು ನನಗೆ ಅರ್ಥವಾಗುತ್ತಾ ಇಲ್ಲ. ಪೂರ್ವಭಾವಿಯಾಗಿ ಎಲ್ಲಾ ಕ್ರಮಗಳನ್ನು ಅನುಸರಿಸಿಯೂ ಕೂಡ ಇದುವರೆಗೆ ಆಸ್ಪತ್ರೆಯನ್ನು ಮಂಜೂರು ಮಾಡದೆ ಇರುವುದಕ್ಕೆ ಕಾರಣ ಏನು? ದಯಮಾಡಿ ಅದನ್ನು ತಿಳಿಸಬೇಕು.

ಡಾ॥ ಎ.ಬಿ. ಮಲಕರೆಡ್ಡಿ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಜಯಚಂದ್ರ ಅವರು ಈ ವಿಷಯದಲ್ಲಿ ನನ್ನನ್ನು ಎರಡು-ಮೂರು ಸಲ ಭೇಟಿ ಕೂಡ ಆಗಿದ್ದರು. ನಮ್ಮ ಅಧಿಕಾರಿಗಳ ಜೊತೆ ಇದರ ಬಗ್ಗೆ ನಾನು ಸಮಾಲೋಚನೆಯನ್ನು ಕೂಡ ಮಾಡಿದ್ದೇನೆ. ಯಾವ ರೀತಿ ಮಾನ್ಯ ಸದಸ್ಯರು ತಮ್ಮ ಬೇಡಿಕೆಯನ್ನು ಇಟ್ಟಿದ್ದಾರೆ, ಅದೇ ರೀತಿ 224 ಸದಸ್ಯರು ಕೂಡ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಖಚಿತವಾಗಿ, ಅವಶ್ಯಕವಾಗಿ ಬೇಕಾಗುತ್ತದೆ ಎಂದು ಅವರೆಲ್ಲರೂ ಕೂಡ ಮನವಿಯನ್ನು ನಮ್ಮ ಮುಂದಿಟ್ಟಿದ್ದಾರೆ. ಅದಕ್ಕಾಗಿ ಸರ್ಕಾರದವರು ಕೆಲವು ನಾರ್ಮ್ಸ್‌ಗಳನ್ನು ಹಾಕಿದ್ದೇವೆ. ಕೆಲವು ಶರತ್ತುಗಳಿವೆ. ಆ ಷರತ್ತುಗಳಿಗೆ ಒಳಪಟ್ಟಿಯೇ ನಾವು ಕೊಡಬೇಕಾಗುತ್ತದೆ. ಅದರ ಪ್ರಕಾರ ಮೂವತ್ತು ಸಾವಿರ ಜನಸಂಖ್ಯೆಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಕೊಡತಕ್ಕಂಥಾದ್ದು ಆದರೆ ಈ ತರೂರು ಗ್ರಾಮದ ಪಕ್ಕದಲ್ಲಿ ದೊಡ್ಡ ಅಗ್ರಹಾರದಲ್ಲಿ ಸುಮಾರು ಏಳು ಕಿಲೋ ಮೀಟರ್‌ನಲ್ಲಿ ಬಹಳ ವರ್ಷಗಳಿಂದ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಇದೆ.

ಅದು ಟಿ.ಡಿ.ಬಿ. ಇದ್ದಾಗ ಆದದ್ದು. ತರೂರು ಗ್ರಾಮಕ್ಕೆ ಇಷ್ಟು ಸಮೀಪದಲ್ಲಿ ದೊಡ್ಡ ಅಗ್ರಹಾರ ಎಂಬಲ್ಲಿ ಪ್ರೈಮರಿ ಹೆಲ್ತ್ ಸೆಂಟರ್ ಇರುವಾಗ, ಒಂದು ವೇಳೆ ನಾವು ತರೂರು ಗ್ರಾಮಕ್ಕೆ ಕೊಟ್ಟಿದ್ದೇ ಆದರೆ, ಅಗ್ರಹಾರದ ಜನಸಂಖ್ಯೆ ಕಡಿಮೆಯಾಗಿ ಬಿಡುತ್ತದೆ. ಈಗ ತರೂರು ಮತ್ತು ಅಗ್ರಹಾರಕ್ಕೆ ಕೊಟ್ಟಿದ್ದೇ ಆದರೆ ಸುಮಾರು ಅರವತ್ತು ಸಾವಿರ ಜನಸಂಖ್ಯೆ ಬೇಕು. ಮತ್ತೊಂದು ಪ್ರಶ್ನೆ ಇದೆ. ತರೂರು

ಗ್ರಾಮಕ್ಕಿಂತಲೂ ಹೆಚ್ಚು ಆದ್ಯತೆ ಮೇಲೆ ಆರೋಗ್ಯ ಸೌಲಭ್ಯವನ್ನು ಕೊಡಬೇಕಾಗಿರತಕ್ಕಂಥ ಅನೇಕ ಗ್ರಾಮಗಳು ಸರ್ಕಾರದ ಪರಿಶೀಲನೆಯಲ್ಲಿದೆ. ವಸ್ತುಸ್ಥಿತಿ ಹೀಗಿದ್ದಾಗ ಆದರೂ ಕೂಡ ಸರ್ಕಾರ ಸಹಾನುಭೂತಿಯಿಂದ ಪರಿಶೀಲನೆ ಮಾಡಬಹುದು ಎಂಬ ಕಾರಣದಿಂದ 'ಇದನ್ನು ಪರಿಶೀಲಿಸಲಾಗಿದೆ' ಎಂಬುದಾಗಿ ಹೇಳಿದ್ದೇವೆ. ಮಾನ್ಯ ಸದಸ್ಯರಾದ ಶ್ರೀ ಜಯಚಂದ್ರ ಅವರ ಹತ್ತಿರ ಜನಸಂಖ್ಯೆಯ ಆಧಾರದಮೇಲೆ ಇನ್ನೂ ಹೆಚ್ಚಿನ ಅಂಕಿಸಂಖ್ಯೆಗಳು ಏನಾದರೂ ಇದ್ದರೆ, ಅವರು ನನ್ನ ಕೊಠಡಿಗೆ ಬಂದು ಭೇಟಿಯಾಗಲಿ. ಬಹಳ ಸಹಾನುಭೂತಿಯಿಂದ ಅದನ್ನು ಪರಿಶೀಲನೆ ಮಾಡಿ ವಿಚಾರ ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನಮಗೆ ಸಹಾನುಭೂತಿ, ಅನುಕಂಪ ಅವೆಲ್ಲಾ ಬೇಡ. ನಮಗೆ ಆಜ್ಞೆ ಬೇಕು. ಇದರ ಬಗ್ಗೆ ಕ್ಲಿಯರ್ ಆಗಿ ವಚನ ಕೊಡಿ. ದೊಡ್ಡ ಅಗ್ರಹಾರ ಇರತಕ್ಕಂಥಾದ್ದು ಬುಕ್ಕಾಪಟ್ಟಣ ಹೋಬಳಿಯಲ್ಲಿ, ಇದು ಇರತಕ್ಕಂಥಾದ್ದು ಕಳ್ಳಂಬೆಳ್ಳ ಹೋಬಳಿಯಲ್ಲಿ, ತರೂರಿಗೂ ದೊಡ್ಡ ಅಗ್ರಹಾರಕ್ಕೂ 16 ಕಿಲೋಮೀಟರ್ ದೂರ ಇದೆ. ನಿಮ್ಮ ನಿಯಮಗಳನ್ನು ಮೀರಿ ಒಂದೊಂದು ಕಿಲೋಮೀಟರ್ ಒಳಗೆ ಆಸ್ಪತ್ರೆಗಳನ್ನು ಕೊಟ್ಟಿರುವ ನಿದರ್ಶನಗಳು ಇಲ್ಲವೇ? ಅದರ ಬಗ್ಗೆ ಪ್ರಶ್ನೆ ಕೇಳಿ ಅದನ್ನು ಆಧಾರ ಮಾಡಿಕೊಂಡು ನಾನು ಒತ್ತಾಯ ಮಾಡುತ್ತಿಲ್ಲ. ತಾವು ಅಧಿಕಾರಿಗಳಿಂದ ಪಡೆದ ಉತ್ತರವನ್ನು ಕೊಡಬೇಡಿ. ನಾವು ಸ್ಥಳೀಯ ಜನರ ಪ್ರತಿ ನಿಧಿಗಳು, ಸ್ಥಳೀಯವಾದ ಸಮಸ್ಯೆಗಳು ನಮಗೆ ಚೆನ್ನಾಗಿ ಗೊತ್ತಿರುತ್ತವೆ. ದೊಡ್ಡ ಅಗ್ರಹಾರಕ್ಕೂ ತರೂರಿಗೆ ಯಾವುದೇ ತರಹದ ಸಂಬಂಧ ಇಲ್ಲದೇ ಇರುವುದರಿಂದ ಅಲ್ಲಿ ಅವಶ್ಯಕವಾಗಿ ಆಸ್ಪತ್ರೆ ಬೇಕಾಗಿದೆ. ಇವತ್ತು ಡಾಕ್ಟರ್ ಆಗಿರುವವರೇ ಆರೋಗ್ಯ ಸಚಿವರಾಗಿರುವುದರಿಂದ ನಿಮ್ಮಿಂದಾದರು ಈ ಕೆಲಸ ಆಗಬೇಕು. ಆದ್ದರಿಂದ ಈ ಸಾಲಿನಲ್ಲೇ ಈ ಆಸ್ಪತ್ರೆಯನ್ನು ಮಂಜೂರು ಮಾಡಿ ಕೊಡಬೇಕು. ಆದ್ದರಿಂದ ಆಸ್ಪತ್ರೆ ಮಂಜೂರಾತಿಗೆ ಆಜ್ಞೆ ಕೊಟ್ಟಿದ್ದೇನೆಂದು ಹೇಳಿದರೆ ನನಗೆ ಭಾರಿ ಸಂತೋಷವಾಗುತ್ತದೆ.

ಡಾ॥ ಎ.ಬಿ. ಮಲಕರೆಡ್ಡಿ : ಮಾನ್ಯ ಅಧ್ಯಕ್ಷರೆ, ಅವರು ತರೂರಿಗೆ ಮತ್ತು ದೊಡ್ಡ ಅಗ್ರಹಾರಕ್ಕೆ ಸಂಬಂಧವಿಲ್ಲ ಎನ್ನುವುದನ್ನು ನಾನು ಒಪ್ಪುವುದಿಲ್ಲ. ಅದನ್ನು ಒಂದು ಯೂನಿಟ್ ಎಂದು ಪರಿಗಣಿಸಿಯೇ ಆ ತಾಲ್ಲೂಕಿನಲ್ಲಿ ಆಸ್ಪತ್ರೆಯಲ್ಲಿ ಮಾಡಲಾಗಿದೆ. ಆದರೆ ಅವರು ಮನವಿ ಮಾಡಿರುವುದನ್ನು ಸರ್ಕಾರ ಸಹಾನುಭೂತಿಯಿಂದ ಪರಿಶೀಲಿಸುತ್ತದೆ.

**ನಂಜನಗೂಡು ಪಟ್ಟಣದ ದಳವಾಯಿ ಶಾಲಾ ಕಟ್ಟಡ ಕೆಡವಿರುವುದು**

576 - ಶ್ರೀ ಎಂ. ಮಹಾದೇವ್ (ನಂಜನಗೂಡು) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ನಂಜನಗೂಡು ಪಟ್ಟಣದ ದಳವಾಯಿ ಶಾಲಾ ಕಟ್ಟಡ ಕೆಡವಿ ಬಹಳ ವರ್ಷವಾಗಿದ್ದು ಮಕ್ಕಳಿಗೆ ಸ್ಥಳವಿಲ್ಲದೇ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

*ಆ) ಹಾಗಿದ್ದಲ್ಲಿ ಈ ಕಟ್ಟಡ ಮಂಜೂರಾತಿಗೆ ಸರ್ಕಾರದ ಅನುಮತಿ ಕೊಟ್ಟಿದೆಯೇ?*

*ಇ) ಕೊಟ್ಟಿದ್ದಲ್ಲಿ ಯಾವಾಗ ಪ್ರಾರಂಭಿಸುವುದು?*

*ಈ) ಈ ದಳವಾಯಿ ಶಾಲೆ ಕಟ್ಟಲು ತಗಲುವ ಅಂದಾಜು ರೂಪಿಸಲಾಗಿದೆಯೇ?*

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :

ಅ) ಹೌದು

ಆ) ಅಂದಾಜು ರೂ. 48.00 ಲಕ್ಷಗಳ ಅಂದಾಜುಪಟ್ಟಿ ಮತ್ತು ನಕ್ಷೆಗೆ ಸರ್ಕಾರ ಆದೇಶ ಸಂಖ್ಯೆ ಇಡಿ 303 ಯೊಸಕ 93ರಲ್ಲಿ ದಿ : 2-4-94ರಂದು ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ.